ಸಂತರ ಜೀವನ

# ದೀನ ಸಂತನ ಪವಿತ್ರ ಕಥೆ


**ಸ್ವಾಮಿ ವೀರೇಶಾನಂದ**



ಅವನ ಹೆಸರು ಕುಪರ್‌ಟಿನೋದ ಜೋಸೆಫ್. ಅವನು ಹುಟ್ಟಿದ್ದು ಇಟಲಿಯ ಕುಪರ್‌ಟಿನೋ ಎಂಬ ಒಂದು ಹಳ್ಳಿಯಲ್ಲಿ ; ೧೬೦೩ ರಲ್ಲಿ. ಜೋಸೆಫ್ ಒಬ್ಬ ನತದೃಷ್ಟ ಹುಡುಗ. ಅವನು ತನ್ನ ಜೀವನವನ್ನು ಆರಂಭಿಸಿದ್ದೇ ನಿರಾಶೆಯಿಂದ. ಅವನ ಬಾಳುವೆಯಲ್ಲಿ ಯಾವುದೂ ಅವನ ಪರವಾಗಿ ನಡೆಯುತ್ತಲೇ ಇರಲಿಲ್ಲ. ಎಲ್ಲವೂ ಅವನ ವಿರುದ್ಧವಾಗಿಯೇ ನಡೆಯುತ್ತಿತ್ತು. ತನ್ನ ಓರಗೆಯ ಹುಡುಗರಷ್ಟೂ ಅವನು ಜಾಣನಾಗಿರಲಿಲ್ಲ. ಬಹಳ ಮುಟ್ಠಾಳನಂತೆ ನಡೆದುಕೊಳ್ಳುತ್ತಿದ್ದನು. ಉಳಿದ ಹುಡುಗರು ಹುರುಪಿನಿಂದಿದ್ದರೆ, ಇವನಿಗೆ ಯಾವ ಉತ್ಸಾಹವೂ ಇರುತ್ತಿರಲಿಲ್ಲ. ಉಳಿದವರು ಅಂದವಾಗಿದ್ದರೆ, ಇವನೋ ಕುರೂಪಿ. ಉಳಿದವರಿಗೆ ಅವರ ಹೆತ್ತವರು ಒತ್ತಾಸೆ ನೀಡಿ, ಕೊಡುಗೆಗಳನ್ನು ಕೊಡುತ್ತಿದ್ದರು. ಇವನೋ ತನ್ನ ಹೆತ್ತವರಿಂದ ಪಡೆಯುತ್ತಿದ್ದುದು ಬೈಗುಳ, ಹೊಡೆತಗಳನ್ನು. ಉಳಿದ ಹುಡುಗರು ಆತ್ಮವಿಶ್ವಾಸದಿಂದ ನಳನಳಿಸುತ್ತಿದ್ದರೆ, ಇವನೋ ಮಾನಸಿಕ ಖಿನ್ನತೆಯಿಂದ ನರಳುತ್ತ ಕಂಗಾಲಾಗಿದ್ದನು. ಉಳಿದವರು ಧೈರ್ಯದಿಂದ ಎಲ್ಲ ಕೆಲಸಗಳನ್ನು ಮಾಡುತ್ತಿದ್ದರೆ, ಇವನು ಏನು ಮಾಡಲಿಕ್ಕೂ ಭಯದಿಂದ ತತ್ತರಿಸುತ್ತಿದ್ದನು. ಉಳಿದವರು ತಮ್ಮೆಲ್ಲ ಕೆಲಸಗಳನ್ನೂ ಸಲೀಸಾಗಿ ಮಾಡುತ್ತಿದ್ದರೆ, ಇವನು ಸಣ್ಣ ಸಣ್ಣ ಕೆಲಸಗಳನ್ನು ಮಾಡುವುದಕ್ಕೂ ಪರದಾಡುತ್ತಿದ್ದನು. ಅವನು ಮುಟ್ಟಿದ್ದೆಲ್ಲ ನಾಶವಾಗುತ್ತಿತ್ತು; ಮಾಡಿದ ಕೆಲಸವೆಲ್ಲ ಹಾಳಾಗುತ್ತಿತ್ತು.

ದುರದೃಷ್ಟವೆನ್ನುವುದು ಹುಟ್ಟುವುದಕ್ಕೆ ಮುಂಚೆಯೇ ಈ ಹುಡುಗನ ಬೆಂಬತ್ತಿದಂತಿತ್ತು. ಅವನ ತಂದೆ ಮರಗೆಲಸ ಮಾಡುತ್ತಿದ್ದನು. ಆದರೆ ಅವನಿಗೆ ತನ್ನ ಕುಟುಂಬವನ್ನು ಸಾಕುವಷ್ಟು ವರಮಾನವಿರಲಿಲ್ಲ. ಗಳಿಸಿದ್ದೆಲ್ಲ ಖರ್ಚಾಗಿಹೋಗುತ್ತಿತ್ತು. ಹಣಕಾಸು ವ್ಯವಹಾರದಲ್ಲಿ ಅವನಿಗೆ ಯಾವುದೇ ಕೌಶಲ್ಯವಿರಲಿಲ್ಲ. ಮಗ ಹುಟ್ಟುವ ಸಮಯಕ್ಕೆ ಅವನು ಕಡುಬಡತನದಲ್ಲಿದ್ದನು. ಅವನ ಎಲ್ಲ ಪ್ರಯತ್ನಗಳೂ ವಿಫಲವಾಗಿದ್ದವು. ಜೋಸೆಫ್ ಮನೆಯ ಹಿಂದಿನ ಒಂದು ಪಡಸಾಲೆಯಲ್ಲಿ ಹುಟ್ಟಿದನು. ಪ್ರಾರಂಭದಿಂದಲೂ ಅವನ ತಾಯಿಯೇ ಅವನ ಬಗ್ಗೆ ಅಸಹ್ಯ ಭಾವನೆಯನ್ನು ಇಟ್ಟುಕೊಂಡಿದ್ದಳು. ಇಂಥ ಬಾಲ್ಯವನ್ನು ಹೊಂದಿದ ಅವನ ಭವಿಷ್ಯ ಕರಾಳವಾಗಿತ್ತು. ಬಾಲ್ಯದಿಂದಲೇ ಅವನು ರೋಗಿಯಾಗಿ ಬೆಳೆದನು. ದಾರಿದ್ರ್ಯವೇ ಮೂರ್ತಿವೆತ್ತಂತೆ ಇದ್ದನು. ಜಗತ್ತಿನಲ್ಲಿದ್ದ ಎಲ್ಲ ಬಗೆಯ ಕಾಯಿಲೆಗಳಿಗೂ ಅವನು ತುತ್ತಾಗುವಂತೆ ಕಾಣುತ್ತಿತ್ತು. ಹಲವಾರು ಬಾರಿ ಅವನು ಯಮನ ಮನೆಯ ಬಾಗಿಲನ್ನು ತಟ್ಟಿ ಬದುಕಿ ಬಂದಿದ್ದನು. ನಿಜ ಹೇಳಬೇಕೆಂದರೆ, ಅವನು ಸತ್ತುಹೋಗುವುದೇ ಅವನ ಹೆತ್ತವರಿಗೂ ಬೇಕಾಗಿತ್ತು. ಏಕೆಂದರೆ ಅವನನ್ನು ಸಾಕುವುದು ಅವರಿಗೂ ಸಾಕುಸಾಕಾಗಿತ್ತು. ಜೋಸೆಫನ ತಾಯಿಯೇನೋ ಒಳ್ಳೆಯವಳೇ. ಆದರೆ ಕಡುಬಡತನ, ಕಠಿಣ ಪರಿಶ್ರಮ, ಮಗನ ಮೂರ್ಖತನ – ಇವು ಅವಳ ಹೃದಯವನ್ನು ಕಲ್ಲಾಗಿಸಿತ್ತು. ಇದಕ್ಕೆ ಸರಿಯಾಗಿ ಜೋಸೆಫ್ ಕೂಡ ತನಗೆ ಕೊಟ್ಟ ಎಲ್ಲ ಕೆಲಸದಲ್ಲಿಯೂ ಎಡುವುತ್ತಿದ್ದನು. ಹೀಗಾಗಿ ತಾಯಿಯು ಮಗನನ್ನು ಕ್ರೂರವಾಗಿ ದಂಡಿಸುತ್ತಿದ್ದಳು. ಜೋಸೆಫ್‌ಗೆ ಏಳು ವರ್ಷ ವಯಸ್ಸಾಗಿದ್ದಾಗ, ಅಲ್ಸರ್ ಕಾಯಿಲೆ ಬಂದಿತ್ತು. ಅದೊಂದು ಗುಣವಿಲ್ಲದ ಕಾಯಿಲೆ. ಇದರಿಂದಾಗಿ ಅವಳ ಮನಸ್ಸು ಇನ್ನೂ ಕಹಿಯಾಯಿತು. ಈ ಹುಡುಗ ಇಡೀ ಕುಟುಂಬಕ್ಕೊಂದು ದೊಡ್ಡ ಪೀಡೆ ಎಂದೇ ಅವಳು ಭಾವಿಸಿದ್ದಳು.

ಯಾರೂ ಜೋಸೆಫ್‌ನನ್ನು ಇಷ್ಟಪಡುತ್ತಿರಲಿಲ್ಲ. ಅವನ ತಾಯಿ ಕೂಡ ಅವನನ್ನು ಕಡೆಗಣಿಸಿದ್ದಳು. ಈ ವಾಸ್ತವ ಸಂಗತಿಯನ್ನು ಬಾಲ್ಯದಲ್ಲಿಯೇ ಜೋಸೆಫನು ಒಪ್ಪಿಕೊಂಡಿದ್ದನು. ಅವನು ತನ್ನನ್ನೇ ಇಷ್ಟಪಡುತ್ತಿರಲಿಲ್ಲ. ತಾನು ಇಷ್ಟಪಡುವುದು ಯಾವುದು, ತನಗೆ ಏನು ಬೇಕು ಎಂಬುದೂ ಅವನಿಗೆ ಗೊತ್ತಿರಲಿಲ್ಲ. ತಾನು ಏನು ಮಾಡಬೇಕು, ಈಗ ತಾನು ಮಾಡುತ್ತಿದ್ದೇನೆ ಎಂಬುದರ ಪರಿವೆಯೂ ಅವನಿಗೆ ಇರಲಿಲ್ಲ. ಏನನ್ನೋ ಯೋಚಿಸುತ್ತ, ಊಟವನ್ನು ಕೂಡ ಸರಿಯಾದ ಹೊತ್ತಿಗೆ ಮಾಡುತ್ತಿರಲಿಲ್ಲ. ನೆನಪಿಸಿದಾಗ, 'ಅಯ್ಯೋ ಮರೆತುಬಿಟ್ಟೆನೇ' ಎನ್ನುತ್ತಿದ್ದನು. ಪುಸ್ತಕವಿದ್ಯೆ ಅವನ ಮಸ್ತಕಕ್ಕೆ ಹತ್ತಲಿಲ್ಲ. ಹೀಗಾಗಿ ಬೂಟ್ಸ್ ಶೂ ಮುಂತಾದವುಗಳನ್ನು ಮಾಡಲಾದರೂ ಕಲಿಯಲಿ ಎಂದು ಆ ಅಂಗಡಿಯಲ್ಲಿ ಅವನನ್ನು ಬಿಟ್ಟರು. ಅದೂ ಕೂಡ ಉಪಯೋಗಕ್ಕೆ ಬರಲಿಲ್ಲ. ಜೋಸೆಫನ ಮನಸ್ಸು



ಎಲ್ಲೋ ಹೊಯ್ದಾಡುತ್ತಿತ್ತು. ಕೊಟ್ಟ ಕೆಲಸದ ಮೇಲೆ ಒಂದು ಸ್ವಲ್ಪವೂ ನಿಗಾ ಇರುತ್ತಿರಲಿಲ್ಲ. ಶೂ ಮಾಡುವುದನ್ನು ಅವನು ಕಲಿಯಲೇ ಇಲ್ಲ. ಅಂಗಡಿಯ ಯಜಮಾನ ಉದಾರಿ. ಪಾಪದ ಹುಡುಗ, ಏನೋ ಮಾಡಿಕೊಂಡಿರಲಿ ಎಂದು ಅವನನ್ನು ಬಿಟ್ಟುಬಿಟ್ಟನು.

ಹೀಗೆ ಉಂಡಾಡಿ ಗುಂಡನಾಗಿ ಬೆಳೆದ ಜೋಸೆಫ್‌ನಿಗೆ ಈಗ ಹದಿನೇಳು ವರ್ಷ. ಅವನ ಹಳ್ಳಿಗೆ ಬೇಡುತ್ತ ಬಂದ ಒಬ್ಬ ಕ್ರೈಸ್ತ ಸಾಧುವನ್ನು ಅವನು ನೋಡಿದನು. ಜೀವನದಲ್ಲಿ ಮೊದಲಬಾರಿಗೆ ಒಂದು ಹೊಸ ಭಾವನೆ ಅವನಿಗೆ ಬಂದಿತು. ಈ ಜಗತ್ತಿನಲ್ಲಿ ನನಗೆ ಯಾವ ಉದ್ಯೋಗವೂ ಸಾಧ್ಯವಿಲ್ಲ ಎನ್ನುವುದನ್ನು ಅವನು ಈಗಾಗಲೇ ಅರಿತುಬಿಟ್ಟಿದ್ದನು. ಏಕೆಂದರೆ ಅವನು ಏನನ್ನು ಕಲಿಯಲೂ ಅಸಮರ್ಥನಾಗಿದ್ದನು. ಕನಿಷ್ಠಪಕ್ಷ ನಾನು ಒಬ್ಬ ಭಿಕ್ಷುಕ ಸಾಧುವಾಗ ಬಹುದು; ಅದರಿಂದ ಹೊಟ್ಟೆ ತುಂಬಿಸಿಕೊಳ್ಳಬಹುದು ಎಂಬ ಭಾವನೆ ಅವನ ಮನಸ್ಸಿನಲ್ಲಿ ಬಂದಿತು. ಈ ಕೆಲಸಕ್ಕೇನೂ ಮೆದುಳಿನ ಬುದ್ಧಿ ಬೇಕಾಗಿರಲಿಲ್ಲವಷ್ಟೇ. ಇದೊಂದು ಆಕರ್ಷಣೀಯ ಆಕಾಂಕ್ಷೆಯಾಯಿತು ಅವನಿಗೆ. ಅಲ್ಲದೆ ಅವನ ಇಬ್ಬರು ಸೋದರ ಮಾವಂದಿರು ಕ್ರೈಸ್ತಮತದ ದೀಕ್ಷೆ ಪಡೆದುಕೊಂಡು ಸಂನ್ಯಾಸಿಗಳಾಗಿದ್ದರು. ಇದು ಅವನಿಗೆ ಹೊಸ ಆಸೆಯನ್ನು ಹುಟ್ಟಿಸಿತು; ಉತ್ತೇಜನವನ್ನು ಮೂಡಿಸಿತು.

ಮನೆಯವರಿಗೂ ಅದೇ ಬೇಕಾಗಿತ್ತು. ಧಾರಾಳವಾಗಿ ಹೋಗಿ ಬಾ ಎಂದು ಕಳುಹಿಸಿಕೊಟ್ಟರು. ಆದರೆ ಸಂನ್ಯಾಸಿ ಮಠದಲ್ಲಿ ಪ್ರವೇಶ ಪಡೆದುಕೊಳ್ಳುವುದು ಅಷ್ಟೇನೂ ಸುಲಭವಾಗಿರಲಿಲ್ಲ. ಅದಕ್ಕೆ ಬೇಕಾದ ಕನಿಷ್ಠ ಮಟ್ಟದ ಓದುಬರಹಗಳನ್ನೂ ಅವನು ಕಲಿತಿರಲಿಲ್ಲ. ಕೆಲವು ಮಠಗಳ ಬಾಗಿಲು ತಟ್ಟಿದನು. ಆದರೆ ಅವುಗಳ ಮುಖ್ಯಸ್ಥರಿಂದ ನಿರಾಕೃತನಾದನು. ಕಡೆಗೆ ಒಂದು ಮಠದವರು ಸಾಧಾರಣ ಸಹೋದರನೆಂದು (lay-brother) ಸೇರಿಸಿಕೊಂಡರು. ಅದೂ ಸೀಮಿತ ಅವಧಿಗೆ ಮಾತ್ರ. ಆದರೆ ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಜೋಸೆಫನ ಆಕಾಂಕ್ಷೆಗಳೇನೂ ಒಳ್ಳೆಯವೇ. ಆದರೆ ಅವನು ಅವುಗಳನ್ನು ಪೂರೈಸಿಕೊಳ್ಳಲು ಬೇಕಾದ ಯಾವ ಯೋಗ್ಯತೆಯನ್ನೂ ಪಡೆದಿರಲಿಲ್ಲ. ಮಠದ ಸಂನ್ಯಾಸಿಗಳು ಬಹಳ ತಾಳ್ಮೆಯಿಂದ ಅವನ ತಪ್ಪು ನಡವಳಿಕೆಗಳನ್ನು ಸಹಿಸಿಕೊಂಡರು. ಆದರೆ ಜೋಸೆಫ್ ಅವರಿಗೂ ಬಹಳ ತೊಂದರೆಯಾಗುವ ಹಾಗೆ ನಡೆದುಕೊಂಡನು. ಏನಾದರೂ ಕೆಲಸ ಮಾಡುತ್ತಿದ್ದರೆ, ಹಠಾತ್ತಾಗಿ ನಿಲ್ಲಿಸಿಬಿಡುವನು; ಸುಮ್ಮನೆ ನಿಂತುಬಿಡುವನು. ಮನ ಬಂದ ಕಡೆ, ಕೆಲಸದ ಮಧ್ಯದಲ್ಲಿ ಇರುವಾಗಲೇ ಮಂಡಿಯೂರಿ ಪ್ರಾರ್ಥಿಸಲು ಆರಂಭಿಸಿಬಿಡುವನು. ಆಗ ಸುತ್ತಲಿನ ಪರಿವೆಯೇ ಅವನಿಗೆ ಇರುತ್ತಿರಲಿಲ್ಲ. ಕಡೆಗೆ ಮಠದವರಿಗೂ ಸಾಕುಸಾಕಾಗಿ, ಅವನ ಸಂನ್ಯಾಸಿ ಉಡುಪನ್ನು ಕಿತ್ತುಕೊಂಡು ಜೋಸೆಫ್‌ನನ್ನು ಮನೆಗೆ ಕಳಿಸಿಬಿಟ್ಟರು.

ಮಠದಿಂದ ಹೊರಬಂದ ಆ ದಿನ ಜೋಸೆಫ್‌ನ ಬಾಳಿನಲ್ಲಿಯೇ ಅತ್ಯಂತ ದಾರುಣವಾದ ದಿನ. ಇಡೀ ಪ್ರಪಂಚವೇ ತನಗೆ ಎದುರಾಗಿ ನಿಂತಂತೆ ಅವನಿಗೆ ಅನ್ನಿಸಿತು. ಸಂನ್ಯಾಸಿಯ ಉಡುಪನ್ನು ತೆಗೆದು ಹಾಕಿದ ದಿನ ತನ್ನ ಚರ್ಮವನ್ನೇ ಕತ್ತರಿಸಿ ತೆಗೆದುಹಾಕಿದ ಹಾಗೆ ಆಯಿತು ಎಂದು ಅವನು ಮುಂದೊಂದು ದಿನ ಹೇಳಿಕೊಂಡನು. ಆ ದಿನವನ್ನು ಅವನು ತನ್ನ ಬಾಳಿನುದ್ದಕ್ಕೂ ನೆನಪಿನಲ್ಲಿ ಇಟ್ಟುಕೊಂಡಿದ್ದನು.

ಇಲ್ಲಿಗೇ ಅವನ ಸಮಸ್ಯೆಗಳು ಕೊನೆಗೊಳ್ಳಲಿಲ್ಲ. ಕಾಲೆದ್ದುಕೊಂಡು, ಅವನು ದಾರಿಗುಂಟ ನಡೆದುಕೊಂಡು ಹೋಗುತ್ತಿದ್ದನು. ಎಂದಿನಂತೆ, ದಾರಿಯ ಬದಿಯಲ್ಲಿ ಅನ್ಯಮನಸ್ಕನಾಗಿ ಬಿದ್ದುಕೊಂಡನು. ಎಚ್ಚರಗೊಂಡು ನೋಡಿದಾಗ, ಅವನು ಹೊದ್ದುಕೊಂಡಿದ್ದ ಕೆಲವು ಹರಕುಮುರುಕು ಬಟ್ಟೆಗಳೂ ಮಾಯವಾಗಿದ್ದವು. ಯಾರೋ ಅವುಗಳನ್ನು ಕದ್ದೊಯ್ದಿದ್ದರು. ಅವನ ಟೊಪ್ಪಿ ಕಾಣೆಯಾಗಿತ್ತು; ಪಾದರಕ್ಷೆಗಳು ಮರೆಯಾಗಿದ್ದವು. ಅವನು ಹಾಕಿಕೊಂಡಿದ್ದ ಕೋಟನ್ನು ಹುಳುಗಳು ತಿಂದುಹಾಕಿ, ಅದು ಹರಿದು ಹೋಗಿತ್ತು. ನೋಡಲು ಅವನು ಪಿಶಾಚಿಯಂತೆ ಕಾಣುತ್ತಿದ್ದನು. ಇದಲ್ಲದೆ ಬೀದಿನಾಯಿಗಳು ಅವನ ಮೇಲೆ ಎಗರಿದವು. ಅವನ ಮೈಮೇಲೆ ಉಳಿದುಕೊಂಡಿದ್ದ ಅಷ್ಟಿಷ್ಟು ಬಟ್ಟೆಯನ್ನೂ ಅವು ಹರಿದು ಕಿತ್ತುಹಾಕಿದವು. ಬಡ ಜೋಸೆಫ್ ನಾಯಿಗಳಿಂದ ತಪ್ಪಿಸಿಕೊಳ್ಳಲು ಓಡುತ್ತ ಹೋದನು. 'ಇನ್ನು ಮುಂದೆ ಏನಪ್ಪಾ ಗತಿ?' ಎಂಬ ಭಯ ಅವನನ್ನು ಕಂಗಾಲಾಗಿಸಿತ್ತು. ದಾರಿಯಲ್ಲಿ ಕೆಲವು ಕುರಿಗಾಹಿಗಳು ಕುರಿಗಳನ್ನು ಹೊಡೆದುಕೊಂಡು ಬರುತ್ತಿದ್ದರು. ಜೋಸೆಫನ ವೇಷವನ್ನು ನೋಡಿ, ಇವನೊಬ್ಬ ಭಯಂಕರ ವ್ಯಕ್ತಿಯೆಂದು ಭಾವಿಸಿದರು. ವಿಚಾರಿಸಿದಾಗ ಜೋಸೆಫ್ ಮಾತನಾಡದಾಗದೆ, ತೊದಲಿದನು. ಇದನ್ನು ಕಂಡು ಅವರೆಲ್ಲ ಸೇರಿ ಹೊಡೆಯಲು ಹೋದರು. ಆದರೆ ಅವರಲ್ಲಿ ಒಬ್ಬ ದಯಾಳುವು ಅವರನ್ನು ತಡೆದು ಜೋಸೆಫ್‌ನನ್ನು ಹೋಗಲು ಬಿಟ್ಟನು.

ಕಡೆಗೆ ತನ್ನ ಸೋದರ ಮಾವನಿದ್ದ ಹಳ್ಳಿಗೆ ಬಂದನು ಜೋಸೆಫ್. ಅವನು ಅಷ್ಟರಲ್ಲಿ ನಿತ್ರಾಣನಾಗಿ ಹೋಗಿದ್ದನು ಹಾಗೂ ಹಸಿವೆಯಿಂದ ಬಳಲುತ್ತಿದ್ದನು. ಅವನ ಸೋದರಮಾವ ಆ ಗ್ರಾಮದ ಶ್ರೀಮಂತ ವರ್ತಕ. ದೊಡ್ಡ ಅಂಗಡಿಯನ್ನು ಇಟ್ಟುಕೊಂಡಿದ್ದ. ಅಲ್ಲಿ ಏನಾದರೂ ತನಗೆ ಸಹಾಯ ದೊರಕಬಹುದು ಎಂದು ಜೋಸೆಫ್ ಆಶಿಸಿದ್ದ. ಆದರೆ ಅವನಿಗೆ ಎದುರಾಗಿದ್ದು ನಿರಾಶೆ. ಜೋಸೆಫ್‌ನಂತಹ ಸಂಬಂಧಿಗಳು ಅವನ ಸೋದರಮಾವನಿಗೆ ಬೇಕಾಗಿರಲಿಲ್ಲ. ಆ ವರ್ತಕನು ಈ ಬಡಪಾಯಿಯ ಮೇಲೆ ರೇಗಾಡಿದ್ದು ಮಾತ್ರವಲ್ಲ, ಅವನನ್ನು ಅನ್ನ ನೀರು ಕೊಡದೆ ಅಟ್ಟಿಬಿಟ್ಟನು.

ಕಡೆಗೆ ತನ್ನ ಸ್ವಂತ ಗ್ರಾಮಕ್ಕೆ ಜೋಸೆಫ್ ವಾಪಸ್ಸು ಬಂದನು. ಜೋಸೆಫ್‌ನ ಪೋಷಕರು ಇನ್ನೂ ಬಡತನದಲ್ಲಿ ಬಳಲುತ್ತಿದ್ದರು. ಜೋಸೆಫ್ ಭಯದಿಂದ ನಡಗುತ್ತ ಮನೆಯ ಬಾಗಿಲು ತಟ್ಟಿದನು. ಮನೆಯೊಳಗೆ ತಾಯಿ ಏನೋ ಕೆಲಸ ಮಾಡುತ್ತಿದ್ದಳು. ಜೋಸೆಫ್ ಹೋಗಿ ಅವಳ ಕಾಲಿಗೆ ಬಿದ್ದನು. ಇವನ ದಯನೀಯ ಸ್ಥಿತಿಯನ್ನು ನೋಡಿ ಕನಿಕರಗೊಳ್ಳುವ ಬದಲು, ತಾಯಿ ಬೈಗುಳದ ಸುರಿಮಳೆಯನ್ನು ಸುರಿಸಲಾರಂಭಿಸಿದಳು. ''ನಿನಗೆ ನಾಚಿಕೆ ಆಗಬೇಕು. ಮಠದವರು ಕೂಡ ನಿನ್ನನ್ನು ಹೊರಹಾಕಿದರು. ನೀನು ನಮಗೆಲ್ಲರಿಗೂ ಕೆಟ್ಟಹೆಸರು ತಂದಿದ್ದೀಯೆ'' ಎಂದು ಅವಳು ಕೂಗಾಡಿದಳು.

ಇದಲ್ಲದೆ, ''ನಿನಗೆ ಈ ಮನೆಯಲ್ಲಿ ಜಾಗವಿಲ್ಲ, ಹೊರಟುಹೋಗು. ಜೈಲಿಗೆ ಹೋಗು, ಎಲ್ಲಿಗಾದರೂ ಹೋಗು. ಇಲ್ಲಿ ಮಾತ್ರ ಇರಬೇಡ. ಇಲ್ಲಿ ನಿನಗೆ ಯಾವ ಕೂಳೂ ಸಿಕ್ಕದು'' ಎಂದು ಅರಚಿದಳು.

ಒಂದು ಫ್ರಾನ್ಸಿಸಿಯನ್ ಸಂನ್ಯಾಸಿ ಮಠದಲ್ಲಿ ಅವಳ ಸಹೋದರನೊಬ್ಬನು ಸಂನ್ಯಾಸಿಯಾಗಿದ್ದನು. ಜೋಸೆಫ್‌ನ ತಾಯಿ ಅವನನ್ನು ತನ್ನ ಸಹೋದರನ ಬಳಿಗೆ ಎಳೆದುಕೊಂಡು ಹೋದಳು. ತನ್ನ ಸಹೋದರನಿಗೆ ಬೈದು, ತನ್ನ ಮಗನನ್ನು ಮತ್ತೆ ಸೇರಿಸಿಕೊಳ್ಳುವಂತೆ ತಾಕೀತು ಮಾಡಿದಳು. ಅವನನ್ನು ಯಾವ ರೀತಿಯಲ್ಲಾದರೂ ಸರಿಯೆ, ಮಠದಲ್ಲೇ ಇರಿಸಿಕೊಳ್ಳುವಂತೆ ಬೇಡಿಕೊಂಡಳು. ಏನು ಬೇಕಾದರೂ ಕೆಲಸ ಕೊಟ್ಟು ದುಡಿಸಿಕೊಳ್ಳುವಂತೆ ಕೇಳಿಕೊಂಡಳು. ಅವನನ್ನು ಅಧಿಕೃತವಾಗಿ ಮಠಕ್ಕೆ ಸೇರಿಸಿಕೊಳ್ಳಲು ಅಲ್ಲಿನ ಅಧಿಕಾರಿಗಳು ಒಪ್ಪಲಿಲ್ಲ. ಆದರೆ, ಗೃಹಸ್ಥ ಭಕ್ತನ ರೂಪದಲ್ಲಿ ಮಠದಲ್ಲಿ ಇರಿಸಿಕೊಳ್ಳಲು ಒಪ್ಪಿ, ಅದಕ್ಕೆ ಬೇಕಾದ ನಿಲುವಂಗಿಯನ್ನು ಅವನಿಗೆ ದಯಪಾಲಿಸಿದರು. ಮಠದಲ್ಲಿ ಕತ್ತೆಗಳ ಲಾಯವನ್ನು ನೋಡಿಕೊಳ್ಳುವ ಕೆಲಸವನ್ನು ಕೊಟ್ಟರು. ಅವನು ಅಲ್ಲಿಯೇ ವಾಸಿಸಬೇಕಾಗಿತ್ತು. ರಾತ್ರಿ ಅಲ್ಲಿಯೇ ಒಂದು ಮೂಲೆಯಲ್ಲಿ ಹಲಗೆಯ ಮೇಲೆ ಮಲಗಬೇಕಾಯಿತು.

ಜೋಸೆಫ್‌ನ ಜೀವನದಲ್ಲಿ ಹೊಸ ಬೆಳಕು ಹೀಗೆ ಆರಂಭವಾಯಿತು. ಆ ಲಾಯದ ಕೆಲಸವನ್ನು ಅವನು ತುಂಬ ಇಷ್ಟಪಟ್ಟನು. ಪ್ರಾಣಿಗಳ ಜೊತೆಗೆ ಒಡನಾಟ ಬೆಳೆಸಿಕೊಂಡನು. ಮುಖದಲ್ಲಿ ಮಂದಹಾಸ ಮತ್ತೆ ಮರುಕಳಿಸಿತು. ಮನಸ್ಸಿನಲ್ಲಿ ಆಶಾಭಾವನೆ ಮೂಡಿತು. ಯಾರೂ ಬರದ ಆ ನಿರ್ಜನ ಸ್ಥಳದಲ್ಲಿ ಅವನೊಬ್ಬನೇ ನಕ್ಕು ನಲಿದು, ಕುಣಿದಾಡಿದನು. ಭಗವಂತನ ಆಶೀರ್ವಾದಕ್ಕಾಗಿ ಕೃತಜ್ಞತೆ ಅರ್ಪಿಸಿದನು. ಸಮಸ್ಯೆಗಳ ಮರುಭೂಮಿಯಲ್ಲಿ ಸುತ್ತಾಡಿ ಅವನು ಬವಣೆ ಪಟ್ಟದ್ದಾಯಿತು. ಈಗ ಸುಖದ ಓಯಸಿಸ್ಸಿನಲ್ಲಿ ಆನಂದ ಪಡತೊಡಗಿದ. ಕಳವಳದಿಂದ ಬೆಂದ ಜೋಸೆಫ್ ಈಗ ಸಾಂತ್ವನದ ಸುಧೆಯನ್ನು ಸವಿಯತೊಡಗಿದ.

ಜೊಸೆಫ್‌ನಲ್ಲಿ ಗಮನಾರ್ಹ ಬದಲಾವಣೆಗಳು ಕಂಡುಬರುತ್ತಿದ್ದವು. ಮಠದ ಸಂನ್ಯಾಸಿಗಳು ಅವನಿರುವ ಸ್ಥಳಕ್ಕೆ ಹೋದರೆ, ಅವನು ಅವರನ್ನೆಲ್ಲ ತುಂಬು ಹೃದಯದಿಂದ ಸ್ವಾಗತಿಸುವನು. ಒಬ್ಬ ರಾಜನಂತೆ ಅವನು ಸುಖದ ಸುಪ್ಪತ್ತಿಗೆಯಲ್ಲಿ ಇರುವುದನ್ನು ಕಂಡು ಅವರೆಲ್ಲ ಮೂಕವಿಸ್ಮಿತರಾದರು. ಅವನು ತನ್ನ ಬಗ್ಗೆ ಚಿಂತಿಸುತ್ತಲೇ ಇರಲಿಲ್ಲ. ಯಾವತ್ತೂ ಭಗವದಾನಂದದಲ್ಲಿ ಮಗ್ನನಾಗಿದ್ದನು. ಭಗವತ್ಸೇವೆಯನ್ನು ಮಾಡುವುದಕ್ಕೆ ಅವಕಾಶ ಸಿಕ್ಕಿರುವುದಕ್ಕಾಗಿ ಹರ್ಷಚಿತ್ತನಾಗಿದ್ದನು. ಅವನ ಸಂತೋಷವು ಸಾಂಕ್ರಾಮಿಕವಾಗಿತ್ತು. ಅವನ ಜೊತೆ ಬೆರೆತವರೆಲ್ಲರಿಗೂ ಅದು ತಗಲುತ್ತಿತ್ತು. ಆನಂದದ ಹೊಳೆಯೇ ಆ ದೀನ ಕತ್ತೆ ಲಾಯದಲ್ಲಿ ಹರಿಯುತ್ತಿತ್ತು.

ಬಡಜನರು ಅವನನ್ನು ತುಂಬ ಇಷ್ಟಪಡುತ್ತಿದ್ದರು. ಏಕೆಂದರೆ ಅವನಲ್ಲಿ ಅವರು ತಮ್ಮ ಪ್ರತಿಬಿಂಬವನ್ನೇ ಕಾಣುತ್ತಿದ್ದರು. ಕ್ರಮೇಣ ಸಂನ್ಯಾಸಿಗಳು ಮತ್ತು ಸಾಧಾರಣ ಜನರು – ಹೀಗೆ ಎಲ್ಲರ ಮಧ್ಯೆ, ಜೋಸೆಫ್ ಜನಪ್ರಿಯನಾದನು. ಅವನನ್ನು ಮಠದ ಸಂನ್ಯಾಸಿಯನ್ನಾಗಿ ಸೇರಿಸಿಕೊಳ್ಳಲು ಪ್ರಯತ್ನಗಳು ಆರಂಭವಾದುವು. ಅವನಿಗೆ ಮತ್ತೊಂದು ಅವಕಾಶವನ್ನು ಕೊಡಬೇಕೆಂಬ ಒಮ್ಮತದ ಅಭಿಪ್ರಾಯ ಏರ್ಪಟ್ಟಿತು.

ಹೀಗೆ ಮತ್ತೊಮ್ಮೆ ಜೋಸೆಫ್ ಮಠದ ಸಂನ್ಯಾಸಿಯಾದನು. ಆದರೆ ಇನ್ನೊಂದು ದೊಡ್ಡ ಸಮಸ್ಯೆ ಎದುರಾಯಿತು. ಸಂನ್ಯಾಸಿಯಾಗಿ ಅವನು ಕ್ರೈಸ್ತ ಶಾಸ್ತ್ರಗ್ರಂಥಗಳ ಅಧ್ಯಯನ ಮಾಡಬೇಕಾಗಿತ್ತು. ಜೋಸೆಫನು ಇದರಲ್ಲಿ ಸಂಪೂರ್ಣ ವಿಫಲನಾದನು. ಓದುವುದಾಗಲಿ, ಬರೆಯುವುದಾಗಲಿ ಅವನಿಗೆ ಬಹಳ ಕಷ್ಟವಾಗುತ್ತಿತ್ತು. ಇಷ್ಟರ ಮಧ್ಯೆ, ಒಂದು ಆಶಾಕಿರಣ ಹೊಳೆಯುತ್ತಿತ್ತು. ಬೈಬಲ್ಲಿನ ಒಂದು ವಾಕ್ಯವನ್ನು ಅವನು ನೆನಪಿನಲ್ಲಿ ಇಟ್ಟುಕೊಂಡಿದ್ದನು. ಅದರ ಬಗ್ಗೆ ಅವನು ಭಾವನಾತ್ಮಕವಾಗಿ ಮಾತನಾಡುತ್ತಿದ್ದನು. ಆ ವಾಕ್ಯ ಹೀಗಿತ್ತು: Blessed is the womb that bore you ('ನಿನ್ನನ್ನು ಧರಿಸಿದ ತಾಯಿಯ ಗರ್ಭ ಪುಣ್ಯತಮವಾದುದು') – St. Luke (xi, 27)

ಭಾನುವಾರ ಮತ್ತಿತರ ವಿಶೇಷ ದಿನಗಳಲ್ಲಿ ಪ್ರಾರ್ಥನಾಸಭೆಯನ್ನು ನಡೆಸುವ ಪುರೋಹಿತ (priest) ಹುದ್ದೆಗಾಗಿ ಅವನು ಪರೀಕ್ಷೆಗೆ ಕುಳಿತುಕೊಂಡನು. ಅದೂ ಚರ್ಚಿನ ಒಬ್ಬ ಉನ್ನತಾಧಿಕಾರಿಯ ಆಜ್ಞೆಯ ಮೇರೆಗೆ. ಪ್ರಾಥಮಿಕ ಪರೀಕ್ಷೆಯಲ್ಲಿ ತಾನು ಉತ್ತೀರ್ಣನಾಗುತ್ತೇನೆಂದು ಅವನಿಗೇ ನಂಬಿಕೆ ಇರಲಿಲ್ಲ. ಬೇರೆಯವರಿಗಂತೂ ಇದು ನಿಶ್ಚಯವಾಗಿ ಹೋಗಿತ್ತು. ಆದರೆ ಪರೀಕ್ಷೆಯಲ್ಲಿ ಅವನು ನೆನಪಿನಲ್ಲಿ ಇಟ್ಟುಕೊಂಡಿದ್ದ ಭಾಗವನ್ನೇ ಕೇಳಿಬಿಟ್ಟರು. ಜೋಸೆಫ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿಬಿಟ್ಟ. ಇನ್ನೊಂದು ವರ್ಷ ಅವನು ಕಠಿಣವಾಗಿ ಅಧ್ಯಯನ ಮಾಡಬೇಕಾಗಿತ್ತು. ಅವನಿಗಾಗಿ ಒಬ್ಬ ಶಿಕ್ಷಕನನ್ನೂ ಗೊತ್ತುಮಾಡಲಾಯಿತು. ಆದರೆ ಸಣ್ಣ ಸಣ್ಣ ವಿಷಯವನ್ನೂ ಅವನು ಮರೆತುಬಿಡುತ್ತಿದ್ದನು. ಶಿಕ್ಷಕನಿಗೆ ಸಾಕುಸಾಕಾಯಿತು. ಒಂದು ವರ್ಷದ ನಂತರ ಹೇಗೋ ಪರೀಕ್ಷೆಗೆ ಹೋದನು. ಪರೀಕ್ಷೆಯನ್ನು ಮಾಡಿದ ಬಿಷಪ್ಪನು ಒಳ್ಳೆಯ ಭಾವದಲ್ಲಿದ್ದನು. ಒಬ್ಬನನ್ನು ಪರೀಕ್ಷೆ ಮಾಡಿ, ಸಂತುಷ್ಟನಾಗಿ ಉಳಿದವರು ಕೂಡ ಉತ್ತೀರ್ಣರು ಎಂದು ಘೋಷಿಸಿಬಿಟ್ಟನು. ಹೀಗೆ ಜೋಸೆಫ್ ಕ್ರೈಸ್ತ ಸಂಪ್ರದಾಯದ ಗೌರವಾನ್ವಿತ ಹುದ್ದೆಯಾದ ಪುರೋಹಿತನೂ ಆಗಿಬಿಟ್ಟನು. ಇದನ್ನು ಕೇಳಿ ಎಲ್ಲರೂ ದಂಗಾದರು. ಜೋಸೆಫ್‌ಗೂ ದುಃಖ. ಏಕೆಂದರೆ ಅವನಿಗೆ ಕತ್ತೆ ಲಾಯದ ಜೀವನವೇ ಇಷ್ಟವಾಗಿತ್ತು. ಪುರೋಹಿತನಾಗಿ ಮೆರೆಯುವ ಜೀವನ ಅವನಿಗೆ ಬೇಕಾಗಿರಲಿಲ್ಲ. ಆದರೆ ಭಗವಂತನ ಸಂಕಲ್ಪ ಅತ್ಯಂತ ವಿಚಿತ್ರವಾದುದು, ಅಲ್ಲವೆ? ಪರಮಾತ್ಮನು ತನ್ನವರನ್ನು ತಾನೇ ಆಯ್ಕೆ ಮಾಡಿಕೊಳ್ಳುತ್ತಾನೆ. ಜೋಸೆಫ್ ಅಂಥ ಆಯ್ಕೆ ಮಾಡಿಕೊಂಡವರಲ್ಲಿ ಒಬ್ಬನು. ಆಗ ಅವನಿಗೆ ಕೇವಲ ೨೫ ವರ್ಷ.

ಪುರೋಹಿತನಾದರೂ ಜೋಸೆಫ್ ತನ್ನ ಸರಳ ನಡವಳಿಕೆಯನ್ನು ಬಿಡಲಿಲ್ಲ. ಒಮ್ಮೆ ಕಾಣಿಕೆಗಳನ್ನು ಸ್ವೀಕರಿಸಲು ಊರಿಗೆ ಹೋಗಿದ್ದನು. ಕಾಲಿಗೆ ಚಪ್ಪಲಿಯಿಲ್ಲದೆ, ಬಟ್ಟೆಯಿಲ್ಲದೆ ವಾಪಸ್ಸು ಬಂದನು. ಯಾರೋ ಬಡಜನರು ಅವನ ಚಪ್ಪಲಿಯನ್ನೂ ಕದ್ದಿದ್ದರು. ಅವನಿಗೆ ಅದರ ಪರಿವೆಯೇ ಇರಲಿಲ್ಲ. ಅವನು ಸಂಗ್ರಹಿಸಿದ್ದ ಕಾಣಿಕೆಯ

ಪದಾರ್ಥಗಳೂ ಮಂಗಮಾಯ. ದಾರಿಯಲ್ಲಿ ಅವನನ್ನು ಹೊಡೆದು ಬಡಿದು ಯಾರೋ ತೆಗೆದುಕೊಂಡು ಹೋಗಿದ್ದರು. ಸರಳ ಭಾವದಿಂದ ಚರ್ಚಿನ ಮುಖ್ಯಸ್ಥರಿಗೆ ಅವನು, ''ಫಾದರ್, ದಯವಿಟ್ಟು ನನ್ನನ್ನು ಈ ಕೆಲಸಕ್ಕೆ ಕಳಿಸಬೇಡಿ. ದಯವಿಟ್ಟು ನನ್ನನ್ನು ಹೊರಗೆ ಕಳಿಸಲೇಬೇಡಿ'' ಎಂದು ಹೇಳಿದನು.

ತಾನು ಪಡೆದ ವಿದ್ಯಾಭ್ಯಾಸ ಜೋಸೆಫನ ಚಿಂತನೆಯಲ್ಲಿ ಯಾವ ಮಾರ್ಪಾಡನ್ನೂ ತರಲಿಲ್ಲ. ತಾನೊಬ್ಬ ದೊಡ್ಡ ವ್ಯಕ್ತಿಯೆಂಬ ಯಾವ ಭ್ರಮೆಯೂ ಅವನಲ್ಲಿ ಇರಲಿಲ್ಲ. ಜೀವನದಲ್ಲಿ ನೂರಾರು ಆಘಾತಗಳನ್ನು ಅವನು ಎದುರಿಸಿದನು. ಅವೆಲ್ಲಕ್ಕೂ ತಾನು ನಿಜವಾಗಿಯೂ ಅರ್ಹನು ಎಂದು ದೀನಭಾವದಿಂದ ಒಪ್ಪಿಕೊಂಡನು. ಪುರೋಹಿತಗಿರಿಗೆ ಏರಿದ್ದರೂ, ಮಣ್ಣುಕಲ್ಲುಗಳನ್ನು ಹೊರುವಂಥ ಶ್ರಮದ ಕೆಲಸಗಳನ್ನು ಅವನು ಮಾಡುತ್ತಿದ್ದನು. ಯಾರಾದರೂ ಬೇಡವೆಂದು ಹೇಳಿದರೆ, ''ಈ ಸಹೋದರ ಕತ್ತೆಯು ಇನ್ನೇನು ತಾನೇ ಮಾಡಿಯಾನು?'' ಎನ್ನುವನು. ತನ್ನನ್ನೇ ಅವನು ''ಸಹೋದರ ಕತ್ತೆ'' ಎಂದುಕೊಳ್ಳುತ್ತಿದ್ದನು. ಕೊಠಡಿಯನ್ನು ಸೇರಿದ ಮೇಲೆ, 'ಸಹೋದರ ಕತ್ತೆ'ಯನ್ನು ಹೊಡೆದು ಬಡಿದು ದಂಡಿಸಿಕೊಳ್ಳುವನು. ಇನ್ನೂ ಕಷ್ಟಪಟ್ಟು ಕೆಲಸಮಾಡಬೇಕೆಂದು ಬೈದುಕೊಳ್ಳುವನು.

ಜೋಸೆಫ್‌ನ ಬಾಳುವೆಯ ಈ ಘಟ್ಟದಲ್ಲಿ ಅದ್ಭುತ ಘಟನೆಗಳು ನಡೆಯಲಾರಂಭಿಸಿದವು. ಮೊದಲನೆಯದು ಅವನ ಪ್ರಾರ್ಥನೆ. ಚಿಕ್ಕ ವಯಸ್ಸಿನಿಂದಲೂ ಜಗತ್ತಿನ ಪರಿವೆಯೇ ಇಲ್ಲದೆ, ಅನನ್ಯ ಮನಸ್ಕನಾಗಿ ಏಕಾಗ್ರಚಿತ್ತದಿಂದ ಪ್ರಾರ್ಥಿಸುತ್ತಿದ್ದನು. ಇದು ಭಗವಂತನು ಅವನಿಗೆ ಕೊಟ್ಟ ದೊಡ್ಡ ಬಳುವಳಿಯಾಗಿತ್ತು. ಈ ಅದ್ಭುತ ಶಕ್ತಿಯು ಅವನಲ್ಲಿ ಈಗ ಪೂರ್ಣ ಬೆಳೆದುನಿಂತಿತು. ಸೃಷ್ಟಿಕರ್ತನಾದ ಭಗವಂತನನ್ನು ಇಡೀ ಸೃಷ್ಟಿಯಲ್ಲಿ ಕಾಣಬಲ್ಲ ಅದ್ಭುತ ಅತೀಂದ್ರಿಯ ಶಕ್ತಿಯನ್ನು ಅವನು ಪಡೆದುಕೊಂಡನು. ಇದು ಎರಡನೆಯ ಅದ್ಭುತ. ಈ ಅಪೂರ್ವ ಅನುಭವವು ಅವನ ಹೃದಯ ಮನಸ್ಸುಗಳನ್ನು ಸೂರೆಗೊಳ್ಳುತ್ತಿತ್ತು. ಹಲವು ದಿನಗಳ ಕಾಲ ಅವನ ಮನಸ್ಸನ್ನು ಭಾವಲಹರಿಯಲ್ಲಿ ತೇಲಾಡುವಂತೆ ಮಾಡುತ್ತಿತ್ತು. ಮೂರನೆಯ ಅದ್ಭುತವಂತೂ ಅಸಾಧಾರಣವಾದುದು. ಪ್ರಾರ್ಥನಾ ಸಭೆಯಲ್ಲಿ ಮಂಡಿಯೂರಿ ಬಗ್ಗಿ ಪ್ರಾರ್ಥಿಸುತ್ತಿದ್ದಾಗ, ಅವನ ಶರೀರವು ಯಾವುದೇ ಪ್ರಯತ್ನವಿಲ್ಲದೆ ಮೇಲೇರಿಹೋಗುತ್ತಿತ್ತು. ಈ ಅಲೌಕಿಕ ಪವಾಡವನ್ನು ಕ್ರೈಸ್ತಮತದ ಪರಿಭಾಷೆಯಲ್ಲಿ Levitation ಎಂದು ಕರೆಯುತ್ತಾರೆ.

ಜೋಸೆಫನ ಪವಾಡಶಕ್ತಿಯ ಸುದ್ದಿ ಎಲ್ಲೆಡೆ ಹರಡಿತು. ಇದು ಚರ್ಚಿನ ಉನ್ನತ ಅಧಿಕಾರಿಗಳ ಕಿವಿಯನ್ನೂ ತಟ್ಟಿತು. ಹಲವಾರು ವಿಚಾರಣೆಗಳು ನಡೆದವು. ಸಾಕ್ಷಿ ಸಾಬೀತುಗಳನ್ನು ಸಂಗ್ರಹಿಸಲಾಯಿತು. ಜೋಸೆಫ್ ಮಾತ್ರ ಸುತ್ತಲಿನ ಜಗತ್ತಿನ ಪರಿವೆಯೇ ಇಲ್ಲದೆ ತನ್ನ ಭಾವದಲ್ಲಿಯೇ ಮುಳುಗಿರುತ್ತಿದ್ದನು. ಕಡೆಗೆ ಈ ಪವಾಡಗಳು ಸತ್ಯವಾದರೂ, ಜೋಸೆಫ್‌ನನ್ನು ಜನರಿಂದ ದೂರವಿರುವ ಏಕಾಂತ ಸ್ಥಳಕ್ಕೆ ಕಳಿಸಬೇಕು ಎನ್ನುವ ಅಭಿಪ್ರಾಯ ಹೊರಹೊಮ್ಮಿತು. ಅದರಂತೆಯೇ ಜೋಸೆಫ್‌ನನ್ನು ಪರ್ವತಶ್ರೇಣಿಗಳ ಮಧ್ಯೆ ಇದ್ದ Capuchin convent ಎಂಬಲ್ಲಿಗೆ ಕಳುಹಿಸಲಾಯಿತು.

ಈ ಸಂನ್ಯಾಸಿ ಮಠದಲ್ಲಿ ಜೋಸೆಫ್‌ನನ್ನು ಗೃಹಬಂಧನದಲ್ಲಿ ಇರಿಸಲಾಯಿತು. ಅವನು ಅಲ್ಲಿ ಹೊರಗಿನ ಯಾರೊಡನೆಯೂ ಮಾತನಾಡುವಂತಿರಲಿಲ್ಲ. ಯಾವ ಪತ್ರವನ್ನೂ ಬರೆಯುವಂತಿರಲಿಲ್ಲ. ಅವನಿಗೆ ಬಂದ ಯಾವ ಪತ್ರವನ್ನು ಅವನಿಗೆ ಕೊಡುತ್ತಲೂ ಇರಲಿಲ್ಲ. ಅವನು ಆ ಮಠದ ಹೊರಗಡೆ ಹೋಗಲು ಅನುಮತಿ ಇರಲಿಲ್ಲ. ಹೊರಜಗತ್ತಿನ ಜೊತೆಗೆ ಎಲ್ಲ ಬಗೆಯ ಸಂಬಂಧವೂ ಅವನಿಗೆ ಕಡಿದುಹೋಗಿತ್ತು. ಹೀಗೆ ಏಕೆ ತನ್ನನ್ನು ಹಿಂಸಿಸುತ್ತಿದ್ದಾರೆ ಎಂದು ಜೋಸೆಫ್ ಆಶ್ಚರ್ಯಪಡುತ್ತಿದ್ದನು. ಆದರೆ ಅವನಿಗೆ ಇದ್ದುದು ಒಂದೇ ದುಃಖ – ತನ್ನ ಪ್ರಿಯವಾದ ಮೂಲಮಠವನ್ನು ಬಿಟ್ಟು ಈ ಅಜ್ಞಾತ ಸ್ಥಳಕ್ಕೆ ಬಂದುಬಿಟ್ಟೆನಲ್ಲಾ ಎನ್ನುವುದು.

ಇಷ್ಟೆಲ್ಲ ಆದರೂ, ಅವನಿರುವ ಜಾಗವನ್ನು ಜನರು ಹೇಗೋ ಪತ್ತೆಮಾಡಿದರು. ಅವನ ಆಶೀರ್ವಾದವನ್ನು ಪಡೆಯಲು ಜನರು ಅಧಿಕ ಸಂಖ್ಯೆಯಲ್ಲಿ ಬರಲಾರಂಭಿಸಿದರು. ಅಧಿಕಾರಿಗಳು ಜೋಸೆಫ್‌ನನ್ನು ಇನ್ನೊಂದು ರಹಸ್ಯವಾದ ಜಾಗಕ್ಕೆ ಕಳಿಸಿದರು. ಅಲ್ಲೂ ಇದೇ ಪರಿಸ್ಥಿತಿ ಬಂದೊದಗಿತು. ಅವನು ಮರಣಹೊಂದುವ ತನಕವೂ ಅವನನ್ನು ಒಂದು ಮಠದಿಂದ ಇನ್ನೊಂದು ಮಠಕ್ಕೆ ಸ್ಥಳಾಂತರಗೊಳಿಸುತ್ತಿದ್ದರು. ಅವನ ಜೀವನದ ಕಡೆಯ ಹತ್ತು ವರ್ಷಗಳ ಕಾಲವಂತೂ ಅವನು ಅಕ್ಷರಶಃ ಸೆರೆವಾಸವನ್ನು ಅನುಭವಿಸುತ್ತಿದ್ದಂತೆ ಬಾಳುತ್ತಿದ್ದನು. ಭಕ್ತ ಜನರು ಅವನನ್ನು ಸಂತನೆಂದೇ ಪರಿಭಾವಿಸುತ್ತಿದ್ದರು. ಆದರೆ ಅವನು ಸಾಯುವವರೆಗೂ ಏಕಾಂತವಾಸವನ್ನೇ ಅನುಭವಿಸಿದನು. ಇದೇ ಪ್ರಭು ಏಸುಕ್ರಿಸ್ತನ ಇಚ್ಛೆಯಾಗಿತ್ತು. ಅದಕ್ಕೆ ತಲೆಬಾಗಿ ಜೋಸೆಫ್ ಬಾಳಿದನು.

ಇಂಥ ದಾರುಣ ಪರಿಸ್ಥಿತಿಯಲ್ಲಿಯೂ ಅವನ ದಿವ್ಯಶಕ್ತಿಗಳ ಪ್ರದರ್ಶನ ನಡೆದೇ ಇತ್ತು. ಒಂದು ಮುಂಜಾನೆ, ಪ್ರಾರ್ಥನೆ ಮಾಡಲು ಪ್ರಾರ್ಥನಾಮಂದಿರಕ್ಕೆ ಬಂದಿದ್ದನು. ಆಗ ತನ್ನ ಜೊತೆಯಲ್ಲಿ ಇದ್ದವರಿಗೆ, ಪೋಪ್ ಹಿಂದಿನ ರಾತ್ರಿ ಮರಣಹೊಂದಿದನೆಂದು ಹೇಳಿದನು. ನಂತರವಷ್ಟೇ ಪೋಪ್ ಸತ್ತ ಸುದ್ದಿ ತಿಳಿದುಬಂತು. ಇದೇ ರೀತಿ ಇನ್ನೊಬ್ಬ ಪೋಪನ ವಿಷಯದಲ್ಲಿಯೂ ಅವನ ಮರಣದ ಸುದ್ದಿಯನ್ನು ಮೊದಲೇ ಜೋಸೆಫ್ ಕೊಟ್ಟನು.

ಜೋಸೆಫನ ಜೀವನದ ಕಡೆಯ ಆರು ವರ್ಷಗಳಲ್ಲಿ ಅವನಿಗೆ ಕೆಲವು ಸವಲತ್ತುಗಳನ್ನು ನೀಡಲಾಯಿತು. ಆದರೆ ಅಷ್ಟರಲ್ಲಿ ಇನ್ನೊಂದು ಏಕಾಂತ ಸ್ಥಳಕ್ಕೆ ಕಳಿಸಲಾಯಿತು. ಚರ್ಚಿನ ಸದಸ್ಯರಿಂದ ಅವನನ್ನು ದೂರ ಇರಿಸಲಾಯಿತು. ತನ್ನ ಏಕಾಂತ ಕೊಠಡಿಯ ಪಕ್ಕದಲ್ಲಿ , ಅವನಿಗೆ ಮಾತ್ರವೇ ಪ್ರತ್ಯೇಕವಾದ ಒಂದು ಚಿಕ್ಕ ಪ್ರಾರ್ಥನಾ ಮಂದಿರವಿತ್ತು. ಅದರಲ್ಲಿ ಅವನಿಗೆ ಮಾತ್ರ ಪ್ರಾರ್ಥನೆ ಮಾಡುವ ಅವಕಾಶವಿತ್ತು. ತನ್ನ ಊಟವನ್ನೂ ಅವನು ಪ್ರತ್ಯೇಕವಾಗಿಯೇ ಮಾಡಬೇಕಾಗಿತ್ತು. ಹೀಗೆ ಅವನು ಹಲವಾರು ವರ್ಷಗಳ ಕಾಲ ಸಂಪೂರ್ಣ ಏಕಾಂತದ ಜೀವನವನ್ನು ನಡೆಸಿದನು. ತನ್ನ ಈ ಅಂತಿಮ ಧಾಮದಲ್ಲಿ, ಯಾರೂ ಕೇಳುವವರಲ್ಲದೆ, ಯಾರೂ ವಿಚಾ

ರಿಸುವವರಿಲ್ಲದೆ, ಯಾರನ್ನೂ ನೋಡಲೂ ಆಗದ ಸ್ಥಿತಿಯಲ್ಲಿ ಅವನು ತನ್ನ ಬಾಳನ್ನು ನಡೆಸಿದನು. ಈ ಕಾಲದಲ್ಲಿ ಅವನ ಭಗವದ್ದರ್ಶನದ ಅನುಭವಗಳು ಇನ್ನೂ ಹೆಚ್ಚಾಗುತ್ತ ಹೋದವು. ಭಗವದುನ್ಮಾದದ ಅವಸ್ಥೆಯು ಇನ್ನೂ ತೀವ್ರವಾಗುತ್ತ ಹೋಯಿತು. ದಡ್ಡನೆಂದು ಪರಿಗಣಿಸಿದ್ದ ಈ ಸಂತನು ಪ್ರತಿಕ್ಷಣವೂ ಭಗವದಾನಂದವನ್ನು ಅನುಭವಿಸುತ್ತಿದ್ದನು.

ಅವನ ಕೊನೆಗಾಲ ಸಮೀಪಿಸಿತು. ೧೬೬೩ರ ಆಗಸ್ಟ್ ೧೦ರಂದು ಅವನು ವಿಪರೀತ ಜ್ವರಕ್ಕೆ ತುತ್ತಾದನು. ಆದರೂ ಪ್ರತಿನಿತ್ಯ ಮುಂಜಾನೆ ಪ್ರಾರ್ಥನೆಯನ್ನು ಆಲಿಸಲು ಏಳುತ್ತಿದ್ದನು. ೧೬೬೩ರ ಸೆಪ್ಟೆಂಬರ್ ೧೮ ಕ್ರೈಸ್ತರ ಒಂದು ಪವಿತ್ರ ದಿನ. ಅಂದು ಜೋಸೆಫ್ ಎಂದಿಗಿಂತಲೂ ಹೆಚ್ಚಾಗಿ ಭಗವೋನ್ಮಾದವನ್ನು ಅನುಭವಿಸಿದನು. ಎಂದು ತಾನು ಬೆಳಗಿನ ಸಮಯದ ಪ್ರಾರ್ಥನಾ ಸಭೆಯಲ್ಲಿ ಪಾಲ್ಗೊಳ್ಳಲು ಆಗುವುದಿಲ್ಲವೋ ಅಂದು ಜೀವ ಬಿಡುವೆ ಎಂದು ಮೊದಲೇ ಭವಿಷ್ಯ ನುಡಿದಿದ್ದನು. ಅಂದಿನ ದಿನ ಎಷ್ಟೇ ಪ್ರಯತ್ನಿಸಿದರೂ, ಅವನಿಗೆ ಎದ್ದೇಳಲು ಸಾಧ್ಯವಾಗಲಿಲ್ಲ. ಅಲ್ಲಿ ನೆರೆದಿದ್ದವರಿಗೆ ಅವನು ಒಂದು ಮನವಿಯನ್ನು ಮಾಡಿದನು. ತನ್ನ ದೇಹವನ್ನು ಯಾವುದಾದರೂ ರಸ್ತೆಬದಿಯಲ್ಲಿ, ಯಾರಿಗೂ ತಿಳಿಯಬರದಂತೆ ಹೂತುಬಿಡಿ ಎನ್ನುವುದೇ ಆ ಮನವಿ. ತಾನು ನಿಧನಹೊಂದಿದ ನಂತರ, ಎಲ್ಲರೂ ತನ್ನನ್ನು ಮರೆತುಬಿಡಬೇಕು ಎನ್ನುವುದೇ ಅವನ ಇಚ್ಛೆಯಾಗಿತ್ತು.

ಕಡೆಯ ಕ್ಷಣದಲ್ಲಿ ಅವನ ಭಗವದುನ್ಮಾದ ಇನ್ನೂ ಉತ್ಕಟವಾಯಿತು. ಅವನು ಕ್ರಿಸ್ತನ ಪ್ರಾರ್ಥನೆಯನ್ನು ಸತತವಾಗಿ ಉಚ್ಚರಿಸುತ್ತಿದ್ದನು. ಸಂತ ಪಾಲನ ಉಕ್ತಿಯನ್ನು ಮತ್ತೆ ಮತ್ತೆ ಹೇಳುತ್ತಿದ್ದನು. 'ನಾನು ಕ್ರಿಸ್ತನಲ್ಲಿ ಐಕ್ಯವಾಗಲು ಇಚ್ಛಿಸುತ್ತೇನೆ' ಎನ್ನುವುದೇ ಆ ಉಕ್ತಿ. ಪಕ್ಕದಲ್ಲಿ ಕುಳಿತಿದ್ದವರು ಭಗವತ್ಪ್ರೇಮದ ವಿಷಯವನ್ನು ಎತ್ತಿದರು. ''ಹೌದು, ಹೌದು, ಇದನ್ನು ಮತ್ತೂ ಹೇಳು, ಮತ್ತೂ ಹೇಳು'' ಎಂದು ಜೋಸೆಫನು ಕೂಗಿಕೊಂಡನು. ಅವನು ಏಸುಕ್ರಿಸ್ತನ ಪವಿತ್ರ ನಾಮವನ್ನು ಮತ್ತೆ ಮತ್ತೆ ಉಚ್ಚರಿಸಿದನು. ''ಭಗವಂತನಿಗೆ ಜಯವಾಗಲಿ, ಭಗವಂತನಿಗೆ ಶುಭವಾಗಲಿ, ಭಗವಂತನ ಪವಿತ್ರ ಇಚ್ಛೆಯು ಪೂರ್ತಿಯಾಗಲಿ'' ಎಂದು ಉದ್ಘೋಷಿಸಿದನು. ಅವನ ಹಳೆಯ ಮುಗ್ಧ ನಗು ಮರುಕಳಿಸಿ ಬಂತು. ಅವನ ನಗು ಸುತ್ತ ನೆರೆದಿರುವವರನ್ನು ಹಸನ್ಮುಖರನ್ನಾಗಿ ಮಾಡಿತು. ಹೀಗೆ ನಗುನಗುತ್ತ ಈ ದೀನ ಸಂತನು ಕ್ರಿಸ್ತನ ಪಾದವನ್ನು ಮುಟ್ಟಿದನು. ಆಗ ಅವನಿಗೆ ಕೇವಲ ೬೦ ವರ್ಷ ವಯಸ್ಸಾಗಿತ್ತು. ಇದಾಗಿ ಸರಿಯಾಗಿ ನೂರು ವರ್ಷಗಳ ನಂತರ, ೧೭೭೩ರಲ್ಲಿ ಕ್ಯಾಥೊಲಿಕ್ ಚರ್ಚ್ ಜೋಸೆಫ್‌ನನ್ನು 'ಸಂತ' ನೆಂದು ಗೌರವಿಸಿತು. ಹೀಗೆ ದೀನ ಜೋಸೆಫ್ ಕ್ಯುಪರ್ಟಿನೋ 'ಸಂತ ಜೋಸೆಫ'ನಾದನು; ಪ್ರಭು ಏಸುವಿನ ಹೆಸರಿನಲ್ಲಿ 'ಧನ್ಯ'ನಾದನು.

ಜಪಾನಿನ ಕಥೆಗಳು

# ಚಂದ್ರಕುಮಾರಿ

ಬಂಗಾಳಿ ಮೂಲ : **ರಾಜಕೃಷ್ಣ ಭಟ್ಟಾಚಾರ್ಯ** | ಚಿತ್ರ : **ಜುಂಕೋ ಭಟ್ಟಾಚಾರ್ಯ** | ಕನ್ನಡಾನುವಾದ : **ಗಿರಿಜಾದೇವಿ**

ಇದೊಂದು ಪುರಾತನ ಕಾಲದ ಕತೆ. ಹಸಿರು ಎಲೆಗಳಿಂದ ಕೂಡಿ ದಟ್ಟವಾಗಿ ಬೆಳೆದ ಬಿದಿರು ಮೆಳೆಗಳಿಂದ ತುಂಬಿದ ಕಾಡಿನ ಅಂಚಿನಲ್ಲಿ ಒಬ್ಬ ಮುದುಕಿ ಮತ್ತು ಮುದುಕ ವಾಸವಾಗಿದ್ದರು. ಮುದುಕ ಬಿದಿರು ಕಡಿಯಲು ಪ್ರತಿದಿನವೂ ಕಾಡಿಗೆ ಹೋಗುತ್ತಿದ್ದ. ಬಿದಿರು ಮಾರಿ ಅವರ ಜೀವನ ಸಾಗಿತ್ತು. ಒಂದು ದಿನ ಬಿದಿರು ಕಡಿಯಲು ಹೋದ ಮುದುಕ ಒಂದು ಬಿದಿರಿನ ಮಧ್ಯೆ ಆಕರ್ಷಕವಾದ ಬೆಳಕಿನ ಪ್ರಭೆಯನ್ನು ಕಂಡನು. ಆಗ ಇಳಿಹೊತ್ತು. ಆ ರೀತಿಯ ಬೆಳಕನ್ನು ಅವನು ಹಿಂದೆಂದೂ ಕಂಡಿರಲಿಲ್ಲ. ಮುದುಕ ಬಹು ಎಚ್ಚರಿಕೆಯಿಂದ ಆ ಬಿದಿರನ್ನು ಕಡಿದ. ಆಶ್ಚರ್ಯ! ಬಿದಿರಿನೊಳಗೆ ಅತ್ಯಂತ ಸುಂದರವಾದ ಚಿಕ್ಕ ಹೆಣ್ಣುಮಗುವೊಂದು ಇತ್ತು. ಇವನಿಗೆ ಮಕ್ಕಳಿರಲಿಲ್ಲ. ಈ ಮಗುವನ್ನು ಕಂಡು ಅವನಿಗೆ ಬಹಳ ಸಂತೋಷವಾಯಿತು. ಮಗುವನ್ನು ಅತ್ಯಂತ ಪ್ರೀತಿಯಿಂದ ಎತ್ತಿಕೊಂಡು ಮನೆಗೆ ಬಂದ. ಮುದುಕಿ ಮಗುವನ್ನು ಆದರದಿಂದ ಸ್ವಾಗತಿಸಿದಳು. ಮುದುಕ ಮತ್ತು ಮುದುಕಿ ಮಗುವನ್ನು ಬಹು ಎಚ್ಚರಿಕೆಯಿಂದ, ಪ್ರೀತಿ

